ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 126/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ರತ್ನಾ | ಪ್ರಾಸಾಃ 3 |
| ಗಂಡನ ಹೆಸರು | : | ರಾಮಣ್ಣ ಎಂ.ಕೆ. | ಚಾಸಾಃ 3 |
| ಪ್ರಾಯ | : | 65 ವರ್ಷ | **ದಿನಾಂಕಃ 09.07.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಆದರ್ಶ ನಗರ, ಕೊಯ್ಯೂರು ಗ್ರಾಮ, ಬೆಳ್ತಂಗಡಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಸೊಸೆ, ನನಗೆ ಚಾಸಾ-4, 6 ರವರ ಪರಿಚಯ ಇರುವುದಿಲ್ಲ. ಚಾಸಾ-5 ನಮ್ಮ ಮನೆಯ ನೆರೆಕರೆಯವರು. ಚಾಸಾ-1 ರವರು ನಮ್ಮ ಮನೆಯ ಪಕ್ಕದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಯ ಜೊತೆ ಬಾಡಿಗೆಗೆ 1 ವರ್ಷಗಳ ಹಿಂದೆ ವಾಸವಿದ್ದರು. ಚಾಸಾ-1 ಮತ್ತು ಆರೋಪಿ ಯಾವ ರೀತಿ ಜೀವನ ನಡೆಸುತ್ತಿದ್ದರು ಮತ್ತು ಅವರು ಜಗಳ ಮಾಡುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ಚಾಸಾ-1 ರವರಿಗೆ ಹಲ್ಲೆ ನಡೆಸಿ ಕೊಲೆ ಪ್ರಯತ್ನ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಚಾಸಾ-1 ರವರು ನಮ್ಮ ಮನೆಗೆ ಬಂದು ಏನನ್ನು ಹೇಳಿರುವುದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ಯಾವುದೇ ಸ್ವತ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

2. ದಿನಾಂಕ 28.06.2024 ರಂದು ನಾನು ಮತ್ತು ಚಾಸಾ-2 ರವರು ಬೆಳ್ತಂಗಡಿಯಲ್ಲಿರುವ ಸಂಬಂಧಿಕರ ಮನೆಗೆ ಹೋಗಿ ನಮ್ಮ ಮನೆಗೆ ರಿಕ್ಷಾದಲ್ಲಿ ವಾಪಸ್ಸಾಗುತ್ತಿದ್ದಾಗ ಮೈಂದ ಕೋಡಿಯಲ್ಲಿ ಇಳಿದು, ರಾತ್ರಿ 7.30 ಗಂಟೆಗೆ ಮನೆಯ ಕಡೆಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಚಾಸಾ-4 ರವರಿಗೆ ಸೇರಿದ ರಬ್ಬರ್ ತೋಟದಲ್ಲಿ ಟ್ಯಾಪಿಂಗ್ ಕೆಲಸ ಮಾಡಿ ಸಂಜೀವ ನೇಕಾರರಿಗೆ ಸೇರಿದ ಬಾಡಿಗೆ ಮನೆಯಲ್ಲಿ ವಾಸವಿದ್ದ ಆರೋಪಿ ಮತ್ತು ಚಾಸಾ-1 ರವರ ಮನೆಯಿಂದ ಕೂಗಾಟ ಚೀರಾಟ ಕೇಳಿದಂತೆ ಕುತೂಹಲದಿಂದ ನಾನು ಮತ್ತು ಚಾಸಾ-2 ರವರು ಸದರಿ ಮನೆಗೆ ಹೋಗಿ ನೋಡಲಾಗಿ ಮನೆಯ ಎದುರು ಬಾಗಿಲು ಹಾಕಿದ್ದು ಕಿಟಕಿ ತೆರೆದಿದ್ದು ಅಲ್ಲಿ ಚಾಸಾ-4 ರವರು ಕೂಡ ಇದ್ದು, ಮನೆಯ ಕಿಟಕಿಯಿಂದ ನೊಡಲಾಗಿ ಆರೋಪಿ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಚಾಸಾ-1 ರವರನು ಉದ್ದೇಶಿಸಿ ಈಗಲೇ 50,000 ರೂ ಕೊಡಬೇಕು ಇಲ್ಲದಿದ್ದರೆ ತಾಯಿ ಮನೆಯಿಂದ ನನ್ನ ಖಾತೆಗೆ ಹಾಕಿಸಬೇಕು ಎಂದು ಹೇಳಿದ್ದು ಮತ್ತು ನಿನ್ ತುಲ್ಲು, ಸೂಳೇ ಮುಂಡೆ ಎಂಬುದಾಗಿ ಬೈದು ಚಾಸಾ-1 ರವರು ಧರಿಸಿದ್ದ ಬಟ್ಟೆಯನ್ನು ಆತನ ಕೈಯಲ್ಲಿದ್ದ ಕತ್ತಿಯಿಂದಹರಿದು, ಅವಳನ್ನುಬೆತ್ತಲೆಗೊಳಿಸಿ ಚೂಡಿದಾರ್ ನ ವೇಲ್ ನಿಂದ ಆಕೆಯ ಕೈ ಕಾಲನ್ನು ಕಟ್ಟಿ , ಬಾಯಿಗೆ ಪ್ಲಾಸ್ಟರ್ ಹಾಕಿ ಬಾಯಿಯನ್ನು ಮಚ್ಚಿ ಕತ್ತಿಯಿಂದ ಚಾಸಾ-1 ರವರ ಎರಡು ಕೈಗಳಿಗೆ ಮತ್ತು ಎರಡು ಕಾಲಿನ ತೊಡೆಗಳಿಗೆ ಗೀರಿ ಗಾಯಗೊಳಿಸಿ ಕತ್ತಿಯನ್ನು ಬಿಸಾಕಿ ಅಲ್ಲೇ ಇದ್ದಬಿಯರ್ ಬಾಟಲಿಯಿಂದ ಚಾಸಾ-1 ರವರ ಎಡಕಣ್ಣಿನಎಡಬಾಗಕ್ಕೆ ಹೊಡೆದು ಗಾಯಗೊಳಿಸಿದ ನಂತರ ಬಿಯರ್ ಬಾಟಲಿಯನ್ನು ಅಲ್ಲೇ ಬಿಸಾಡಿ ಚಾಸಾ-1 ರವರನ್ನು ಕೋಣೆಯಲ್ಲಿದ್ದಮಂಚದ ಮೇಲೆ ಎತ್ತಿ ಎತ್ತಿ ಬಿಸಾಡಿ, ಕೊಲೆ

ಮಾಡುವುದಾಗಿ ಹೇಳಿ ರಾಕ್ಷಸನಂತೆ ಆಕೆಯನ್ನು ನೆಲದ ಮೇಲೆ ದೂಡಿ ಹಾಕಿ ಕೊಲೆ ಮಾಡುವ ಉದ್ದೇಶದಿಂದ ಆಕೆಯ ಎದೆಯ ಮೇಲೆ ಕೂತು ಕತ್ತಿನಿಂದ ಹಿಸುಕಿ ದಮ್ಮು ಕಟ್ಟಿಸಿ ಮಾರಾಣಾಂತಿಕವಾಗಿ ಹಲ್ಲೆ ಮಾಡಿದ್ದು ಆ ಸಮಯ ಚಾಸಾ-1 ನೋವಿನಿಂದ ಮತ್ತು ಜೀವ ಭಯದಿಂದ ಸಹಾಯಕ್ಕೆ ಬೊಬ್ಬೆ ಹಾಕಿ ಬೇಡಿಕೊಂಡಾಗ ಘಟನೆಯನ್ನು ಕಿಟಕಿಯಿಂದ ನೋಡಿದ ನಾವುಗಳು ಚಾಸಾ-1 ರವರ ಸಹಾಯಕ್ಕೆ ಹೋದಾಗ ಆರೋಪಿ ಎದುರಿನ ಬಾಗಿಲು ಹಾಕಿ ಚಿಲಕ ಸಿಕ್ಕಿಸಿ ಮನೆಯಿಂದ ಹೊರಗಡೆ ಹೋಗಿದ್ದು ಆ ಸಮಯ ಚಾಸಾ-1 ಒಸರಾಡಿ ಕೈ ಕಾಲಿಗೆ ಕಟ್ಟಿದ ಗಂಟನ್ನು ಬಿಡಿಸಿಕೊಂಡು ಜೀವ ಭಯದಿಂದ ಮೈಮೇಲೆ ಬಟ್ಟೆಯಿಲ್ಲದೆ ಮನೆಯ ಹಿಂಬದಿಬಾಗಿಲಿನಿಂದ ಹೊರಗಡೆ ಓಡಿ ಹೋಗುತ್ತಿದ್ದಾಗ ನಾವು ಅವಳ ಸಹಾಯಕ್ಕೆ ಹೋಗಿ ಚಾಸಾ-2 ರವರು ಅವರ ಬ್ಯಾಗಿನಲ್ಲಿದ್ದ ನೈಟಿಯನ್ನು ಚಾಸಾ-1 ರವರಿಗೆ ಕೊಟ್ಟು ಸದರಿ ನೈಟಿಯನ್ನು ಆಕೆಗೆ ಉಡಿಸಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದಿನಾಂಕ 30.06.2024 ರಂದು ಪೋಲಿಸರಿಗೆ ನಾನು ಘಟನೆಯನ್ನು ಕಣ್ಣಾರೆ ಕಂಡ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ಸಾಕ್ಷಿ ಅಲ್ಲಗಳೆದ ಕಾರಣ ಸದರಿ ಹೇಳಿಕೆಯನ್ನು **ನಿ.ಪಿ.7** ಎಂದು ಗುರುತಿಸಲಾಯಿತು.

3. ಚಾಸಾ-1 ಮತ್ತು ಆರೋಪಿಯು ರಾಜಿ ಮಾಡಿಕೊಂಡು, ಈಗ ಒಟ್ಟಾಗಿ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ಆದ್ದರಿಂದ ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

III ADJ, MANGALURU S.C.No.126/2024 PW-3
Date: 09.07.2025

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಿ.ಆರ್.ಎ. ವಕೀಲರಿಂದಃ</u>**

ಆರೋಪಿ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.